1304(1093) ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಭೂರಹಿತ ಕೃಷಿ ಕಾರ್ಮಿಕರ ಆರ್ಥಿಕ ಸೌಲಭ್ಯ ಪಡೆದಿರುವವರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಭೂರಹಿತ ಕೃಷಿ ಕಾರ್ಮಿಕರಿಗೆ ಸಿಗಬಹುದಾದಂತಹ ಸೌಲಭ್ಯ ನೀಡುವಲ್ಲಿ ಅಧಿಕಾರಿಗಳಿಂದ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಅಂಥಹ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು):

ಅ) ಈ ವಿಷಯವು ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಆ) ಅದೇ

ಇ) ಅದೇ

1305(1094) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಪಶುವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? (ವ್ಯಂದವಾರು, ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಎಷ್ಟು ಹುದ್ದೆಗಳು ಖಾಲಿ ಇವೆ, ಖಾಲಿ ಇದ್ದ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು?

ಇ) ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ, ಹಾಗಿಲ್ಲವಾದಲ್ಲಿ ಕಾರಣಗಳೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ರಾಜ್ಯದಲ್ಲಿ ಪಶುಪಾಲನಾ ಇಲಾಖೆಯಲ್ಲಿ ಒಟ್ಟು 2018 ಪಶುವೈದ್ಯಾಧಿಕಾರಿಗಳ ಮಂಜೂರಾದ ಹುದ್ದೆಗಳು ಮತ್ತು 435 ಸಹಾಯಕ ನಿರ್ದೇಶಕರ ಮಂಜೂರಾದ ಹುದ್ದೆಗಳಿವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

2) ರಾಜ್ಯದಲ್ಲಿ 837 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಮತ್ತು 61 ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇರುತ್ತದೆ. ಪಶುವೈದ್ಯಾಧಿಕಾರಿಗಳ ಖಾಲಿ ಇದ್ದ ಹುದ್ದೆಗಳು ನೇರ ನೇಮಕಾತಿ ಮೂಲಕ ಮತ್ತು ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಪದೋನ್ನತಿ ಹಾಗೂ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು.

3) 2006–07ನೇ ಸಾಲಿನಲ್ಲಿ 236 ಪಶುವೈದ್ಯಾಧಿಕಾರಿಗಳಿಗೆ ವಿಶೇಷ ನೇರ ನೇಮಕಾತಿ ನಿಯಮದಡಿ, ನೇಮಕಾತಿ ಆದೇಶ ಹೊರಡಿಸಲಾಗಿತ್ತು 187 ಪಶುವೈದ್ಯಾಧಿಕಾರಿಗಳು ಕೆಲಸಕ್ಕೆ ಹಾಜರಾಗಿದ್ದಾರೆ. ಈ ಹುದ್ದೆಗಳನ್ನು ಹೊರತುಪಡಿಸಿ 837 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ದಿನಾಂಕ: 22–6–2006 ರಂದು 19 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಿದೆ. 41 ಪಶುವೈದ್ಯಾಧಿಕಾರಿಗಳನ್ನು ನೇಮಿಸಲು ದಿನಾಂಕ: 3–9–2005 ರಂದು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದಲ್ಲದೆ 77 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡಲು ಪ್ರಕ್ರಿಯೆಗಳನ್ನು ಪ್ರಾರಂಭಿಸಿದೆ.

ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಮತ್ತು ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು. 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡಿಸಲು ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

ಅನುಬಂಧ

ಪ್ರಶ್ನೆ ಸಂಖ್ಯೆ: 1094

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಹಾಯಕ ನಿರ್ದೇಶಕರು			ಪಶುವೈದ್ಯಾಧಿಕಾರಿಗಳು		
		ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಬೆಂಗಳೂರು ನಗರ	60	60	0	98	94	4
2	ಬೆಂಗಳೂರು ಗ್ರಾ	21	21	0	80	72	8
3	ತುಮಕೂರು	19	19	0	114	89	25
4	ಚಿತ್ರದುರ್ಗ	14	14	0	59	37	22
5	ದಾವಣಗೆರೆ	11	11	0	69	54	15
6	ಕೋಲಾರ	26	26	0	108	72	36
7	ಶಿವಮೊಗ್ಗ	14	12	2	66	53	13
8	ಮೈಸೂರು	21	19	2	79	54	25

9	ಚಾಮರಾಜನಗರ	10	9	1	30	12	18
10	ದಕ್ಷಿಣ ಕನ್ನಡ	15	13	2	44	33	11
11	ಉಡುಪಿ	9	8	1	35	26	9
12	ಹಾಸನ	15	13	2	87	44	43
13	ಚಿಕ್ಕಮಗಳೂರು	17	16	1	73	45	28
14	ಮಂಡ್ಯ	25	24	1	103	61	42
15	ಕೊಡಗು	11	10	1	32	17	15
16	ಬೆಳಗಾವಿ	21	16	5	145	82	63
17	ಬಿಜಾಪುರ	11	8	3	57	39	18
18	ಬಾಗಲಕೋಟೆ	11	10	1	66	42	24
19	ಧಾರವಾಡ	15	14	1	55	39	19
20	ಗದಗ	7	5	2	57	22	35
21	ಹಾವೇರಿ	15	11	4	75	32	43
22	ಉತ್ತರ ಕನ್ನಡ	13	12	1	85	28	57
23	ಗುಲ್ಬರ್ಗಾ	16	6	10	138	32	106
24	ಬಳ್ಳಾರಿ	11	9	2	81	24	57
25	ಬೀದರ್	10	3	7	75	39	36
26	ರಾಯಚೂರು	8	3	5	59	16	43
27	ಕೊಪ್ಪಳ	9	2	7	48	26	22
	ಒಟ್ಟು	**435**	**374**	**61**	**2018**	**1181**	**837**

1306(1228) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಔಷಧಿ ಮಳಿಗೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಸರ್ಕಾರದ ವತಿಯಿಂದ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಔಷಧಿ ಮಳಿಗೆಗಳು ಎಷ್ಟು? (ಬೆಂಗಳೂರಿನ ಯಾವ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿದೆ, ವಿವರ ನೀಡುವುದು)

ಇ) ಸದರಿ ಸರ್ಕಾರಿ ಔಷಧಿ ಮಳಿಗೆಗಳನ್ನು ತೆರೆಯುವ ಮತ್ತು ಮುಚ್ಚುವ ವೇಳೆಯನ್ನು ತಿಳಿಸುವುದು.

ಈ) ಈ ಸರ್ಕಾರಿ ಔಷಧಿ ಮಳಿಗೆಗಳನ್ನು ದಿನದ 24 ಗಂಟೆಗಳಲ್ಲಿಯು ಸಾರ್ವಜನಿಕ ಉಪಯೋಗಕ್ಕೆ ತೆರೆಯುವ ಕುರಿತು ಸರ್ಕಾರದ ಪ್ರಸ್ತಾಪವಿದಿಯೇ?